| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಕಲಿಕಾ ಫಲ | ಬಳಸಬೇಕಾದ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಕಲಿಕಾ ಫಲ | ಬಳಸಬೇಕಾದ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 EVS-4 | 10 ನಿ | ಪರಿಸರ ಅಧ್ಯಯನ ನನ್ನನ್ನು ನೋಡಿದ್ದೀರಾ ? ಪ್ರಾಣಿಗಳು | ಸುತ್ತಲೂ ಇರುವ ಸಾಮಾನ್ಯ ಪ್ರಾಣಿಗಳು ಮತ್ತು ಸಸ್ಯಗಳನ್ನು ಗುರುತಿಸುವರು. | ಕ್ರೆಯಾನ್ಸ್ ಪೆನ್ಸಿಲ್ ರಬ್ಬರ್ ಪಠ್ಯಪುಸ್ತಕ | ಶಿಕ್ಷಕರು | **ಅಭ್ಯಾಸ ಮತ್ತು ಬಳಕೆಯ ಹಂತ / ಪುನರ್ಬಲನ ಚಟುವಟಿಕೆ :** ಪಠ್ಯಪುಸ್ತಕದ ಪುಟಸಂಖ್ಯೆ 3ನ್ನು ತೆರೆದು ಪೆನ್ಸಿಲ್‌ಗಳನ್ನು ಸಿದ್ಧಪಡಿಸಿಕೊಳ್ಳಲು ತಿಳಿಸುವರು. | ಪರಿಸರ ಅಧ್ಯಯನ ನನ್ನ ಸುತ್ತಲಿನ ಪ್ರಾಣಿಗಳು | ಸ್ಥಳೀಯ ಪ್ರಾಣಿಗಳನ್ನು ಗುರುತಿಸುವರು. | ಕ್ರೆಯಾನ್ಸ್ ರಬ್ಬರ್ ಪೆನ್ಸಿಲ್ ಪಠ್ಯಪುಸ್ತಕ | ಶಿಕ್ಷಕ | ಹಿರೇಮಣಿಯ ನೇತೃತ್ವದಲ್ಲಿ ಪಠ್ಯಪುಸ್ತಕ ಪುಟಸಂಖ್ಯೆ 4ರಲ್ಲಿರುವ ಚಿತ್ರಗಳಿಗೆ ಬಣ್ಣ ಹಾಕಿ ಅವುಗಳ ಕೆಳಗಿನ ಚೌಕದಲ್ಲಿ ಪ್ರಾಣಿಗಳ ಹೆಸರು ಬರೆಯಲು ತಿಳಿಸುವರು. |
| | 30 ನಿ | | | | ಶಿಕ್ಷಕ | ಪುಟಸಂಖ್ಯೆ 3ರಲ್ಲಿನ ಚಟುವಟಿಕೆಯನ್ನು ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿಕೊಂಡು ವೈಯಕ್ತಿಕ ಮಾರ್ಗದರ್ಶನದೊಂದಿಗೆ ಮಕ್ಕಳಿಂದ ಪೂರ್ಣಗೊಳಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯಲ್ಲಿ ಕ್ರಿಯಾತ್ಮಕವಾಗಿ ಹಿರೇಮಣಿಯ ಸಹಾಯದೊಂದಿಗೆ ತೊಡಗಿಸುವರು ಮತ್ತು ಪೂರ್ಣಗೊಳಿಸುವರು. |
| | 05 ನಿ | | | | ಶಿಕ್ಷಕ | ಪುಟಸಂಖ್ಯೆ 4ರಲ್ಲಿ ಚಿತ್ರಗಳಿಗೆ ಹಿರೇಮಣಿಯ ಸಹಾಯದಿಂದ ಬಣ್ಣ ತುಂಬಲು ತಿಳಿಸುವರು. | | | | ಶಿಕ್ಷಕ | ಹಿರೇಮಣಿಯ ನೇತೃತ್ವದಲ್ಲಿ ಪೂರೈಸಿದ ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 30 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | ಹಿರೇಮಣಿ | ಪುಟಸಂಖ್ಯೆ 1ರಲ್ಲಿ ಗುರುತಿಸಿರುವ ಪ್ರಾಣಿಗಳ ಹೆಸರನ್ನು ಅವುಗಳ ಕೆಳಗಿನ ಅಂಕಣದಲ್ಲಿ ಬರೆಸುವರು ಹಾಗೂ ಪುಟಸಂಖ್ಯೆ 3ರಲ್ಲಿರುವ ಕೀಟಗಳ ಹೆಸರನ್ನು ಅವುಗಳ ಕೆಳಗಿನ ಅಂಕಣಗಳಲ್ಲಿ ಶಿಕ್ಷಕರ ಮಾರ್ಗದರ್ಶನದಲ್ಲಿ ಬರೆಸುವರು ಹಾಗೂ ವೈಯಕ್ತಿಕ ಗಮನ ನೀಡುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಗಳನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | 1ನೇ ತರಗತಿಯಲ್ಲಿನ ಚಟುವಟಿಕೆಯ ಪರಿಶೀಲನೆ 2ನೇ ತರಗತಿಯ ಮಕ್ಕಳ ಚಟುವಟಿಕೆಗಳನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | 40 ನಿ | ಸಾಮೂಹಿಕ ಕವಾಯಿತು (ದೈಹಿಕ ಶಿಕ್ಷಣ) | | ಶಾಲಾ ಹೊರಾಂಗಣ | ಶಿಕ್ಷಕರು | ಮಕ್ಕಳನ್ನು ಶಾಲಾ ಹೊರಾಂಗಣಕ್ಕೆ ಕರೆದುಕೊಂಡು ಹೋಗಿ ಸಾಲಿನಲ್ಲಿ ಎತ್ತರಕ್ಕೆ ಅನುಗುಣವಾಗಿ ನಿಲ್ಲುವ ಹಾಗೂ ಸೂಕ್ತ ಅಂತರದೊಂದಿಗೆ ನಿಲ್ಲುವ ಸಾವಧಾನ ಮತ್ತು ವಿಶ್ರಾಂತಿ ಸ್ಥಿತಿಯಲ್ಲಿ ನಿಲ್ಲುವ ಹಾಗೂ ಎಡ ಬಲ, ಹಿಂದಕ್ಕೆ ತಿರುಗುವ ರೀತಿಗಳನ್ನು ತಿಳಿಸುವರು ಮತ್ತು ಅಳವಡಿಸುವರು. | ದೈಹಿಕ ಶಿಕ್ಷಣ | | ಶಾಲಾ ಹೊರಾಂಗಣ | ಶಿಕ್ಷಕರು | ಮಕ್ಕಳನ್ನು ಶಾಲಾ ಹೊರಾಂಗಣಕ್ಕೆ ಕರೆದುಕೊಂಡು ಹೋಗಿ ಸಾಲಿನಲ್ಲಿ ಎತ್ತರಕ್ಕೆ ಅನುಗುಣವಾಗಿ ನಿಲ್ಲುವ ಹಾಗೂ ಸೂಕ್ತ ಅಂತರದೊಂದಿಗೆ ನಿಲ್ಲುವ, ಸಾವಧಾನ ಮತ್ತು ವಿಶ್ರಾಂತಿ ಸ್ಥಿತಿಯಲ್ಲಿ ನಿಲ್ಲುವ ಹಾಗೂ ಎಡ ಬಲ, ಹಿಂದಕ್ಕೆ ತಿರುಗುವ ರೀತಿಗಳನ್ನು ತಿಳಿಸುವರು ಮತ್ತು ಅಳವಡಿಸುವರು. |
| K-7 2 | 10 ನಿ | ಕನ್ನಡ<br>ಠಣ್ ! ಠಣ ! ಠಣ ! | ಸರಳ ಹಾಗೂ ಬಳಕೆಯಲ್ಲಿರುವ .......................................... ಜೊತೆಗೆ ಅರ್ಥಮಾಡಿಕೊಳ್ಳುವುದು. | ಪಠ್ಯಪುಸ್ತಕ | ಶಿಕ್ಷಕ | ಪಠ್ಯಪುಸ್ತಕದ ಚಟುವಟಿಕೆ ಮಾಡಿಸಲು ಮಕ್ಕಳನ್ನು ವೃತ್ತಾಕಾರವಾಗಿ ಕೂರಲು ತಿಳಿಸುವರು. | ಕನ್ನಡ<br>ಮೂರು ಕೊಡಲಿಗಳು | * ಸುಮಾರು ಪದಗಳನ್ನು ಓದಿ ಗ್ರಹಿಸುವ ಸಾಮರ್ಥ್ಯಗಳನ್ನು ಬಳಸುವುದು | ಪೂರಕ ಕಥೆಯ ಕಥಾ ಚಿತ್ರ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :**<br>**ಪೂರಕ ಕಥೆ :** ಬ್ರಾಹ್ಮಣ ಮತ್ತು ಹುಲಿ ಈ ಚಿತ್ರಕಥೆ (ಇಂತಹ ಕಥೆಗಳನ್ನು ಪೂರಕವಾಗಿ ಬಳಸಬಹುದು) ಯನ್ನು ಮಕ್ಕಳಿಗೆ ನೀಡಿ ಹಿರೇಮಣಿ ಓದುವುದನ್ನು ಆಲಿಸುವ ಹಾಗೂ ಸರದಿಯಂತೆ ಓದಲು ತಿಳಿಸುವರು. |
| | 30 ನಿ | | | | ಶಿಕ್ಷಕ | * ಪಠ್ಯಪುಸ್ತಕ ಪುಟಸಂಖ್ಯೆ 2ರಲ್ಲಿ ಇರುವ ಪ್ರಶ್ನೆಗಳನ್ನು ಕೇಳುತ್ತಾ ಸಾಮೂಹಿಕವಾಗಿ ನಂತರ ವೈಯಕ್ತಿಕವಾಗಿ ಉತ್ತರಗಳನ್ನು ಪಡೆಯುವರು.<br>* ಶಿಕ್ಷಕರು ಸಂಗ್ರಹಿಸಿದ ಪ್ರಾಸಪದಗಳನ್ನು ಅಭ್ಯಾಸಮಾಡಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು |
| | 05 ನಿ | | | | ಶಿಕ್ಷಕ | ಎರಡನೇ ತರಗತಿಯಲ್ಲಿ ಸೂಚಿಸಿದ ಚಟುವಟಿಕೆಯಲ್ಲಿ ಭಾಗವಹಿಸುವರು | | | | ಶಿಕ್ಷಕರು | 1 ಮತ್ತು 2ನೇ ತರಗತಿಯ ಎಲ್ಲಾ ಮಕ್ಕಳನ್ನು ವೃತ್ತಾಕಾರ ಮಾಡಿ ಕೂರಿಸುವರು / ನಿಲ್ಲಿಸುವರು. |
| | 30 ನಿ | | | | ಶಿಕ್ಷಕ | 2ನೇ ತರಗತಿಯಲ್ಲಿ ಸೂಚಿಸಿದ ಚಟುವಟಿಕೆಯಲ್ಲಿ ಭಾಗವಹಿಸುವರು. | | | ಚಿತ್ರಪಟಗಳು ಮಿಂಚು ಪಟ್ಟಿಗಳು | ಶಿಕ್ಷಕರು | * ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.<br>ಉದಾ : ನಿನ್ನ ಹೆಸರೇನು ?<br>ನಿನ್ನ ಅಂಗಿಯ ಬಣ್ಣ ಯಾವುದು ? ಇತ್ಯಾದಿ<br>* ಚಿತ್ರಗಳನ್ನು ತೋರಿಸಿ ಪದಗಳನ್ನು ಹೇಳಿಸುವುದು. ಉದಾ : ಕೊಡಲಿ ಚಿತ್ರ ತೋರಿಸಿ ಕೊಡಲಿ ಎಂದು ಹೇಳಿಸುವುದು. ಅದರಂತೆ ಮರ, ನದಿ ದೇವತೆ, ಕೊಳ, ಮೊದಲಾದವು. |
| | 05 ನಿ | | | | ಶಿಕ್ಷಕ | ಎಲ್ಲಾ ಮಕ್ಕಳನ್ನು ಪ್ರೋತ್ಸಾಹಿಸಿ ಚೆನ್ನಾಗಿ ಭಾಗವಹಿಸಿದ ಮಕ್ಕಳನ್ನು ಪ್ರಶಂಸಿಸುವುದು. (ಮುಂದಿನ ಅವಧಿಗೆ ಸಿದ್ಧತೆ ಮಾಡಿಕೊಳ್ಳುವುದು). | | | | | 1ನೇ ತರಗತಿಯಲ್ಲಿರುವಂತೆ ಮಾಡುವುದು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3<br>SUPW-3 | 10 ನಿ | ಸಾ.ಉ.ಉ.ಕಾರ್ಯ. | ನಿರುಪಯುಕ್ತ ವಸ್ತುಗಳಿಂದ ಆಕೃತಿಗಳನ್ನು ರಚಿಸುವ ಸಾಮರ್ಥ್ಯ ಬೆಳೆಸುವುದು. | ಡ್ರಾಯಿಂಗ್ ಶೀಟ್, ಗಮ್, ಕತ್ತರಿ, ಎಲೆ, ಹೂ, ಕಡ್ಡಿಗಳು ಇತ್ಯಾದಿ. | ಶಿಕ್ಷಕ | ಎಲ್ಲಾ ಮಕ್ಕಳನ್ನು ಮೂರು ಅಥವಾ 4 ಮಕ್ಕಳ ತಂಡಗಳಾಗಿ ವಿಂಗಡಿಸುವರು ಹಾಗೂ ಶಾಲಾ ಹೊರ ಆವರಣದಲ್ಲಿ ದೊರೆಯುವ ಎಲೆ, ಹೂವು, ಪಕ್ಷಿಗಳ ಉದುರಿದ ಗರಿಗಳು ಇತರೆ ನಿಸರ್ಗದ ವಸ್ತುಗಳನ್ನು [ಬೇರೆ ಬೇರೆ ಆಕಾರದ] ತರಲು ಸೂಚಿಸುವರು. | *ಸೂಚನೆ :* 1 ಮತ್ತು 2ನೇ ತರಗತಿಗಳ ಸಾಮರ್ಥ್ಯ ಒಂದೇ ಆಗಿರುವುದರಿಂದ 1ನೇ ತರಗತಿಯಲ್ಲಿ ನೀಡಿರುವ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು ಹಾಗೂ ನಿರ್ದಿಷ್ಟ ಸಾಮರ್ಥ್ಯ ಬೆಳೆಸಿಕೊಳ್ಳುವರು. | | | | |
| | 20 ನಿ | | | | ಗುಂಪು ಚಟುವಟಿಕೆ | ಮಕ್ಕಳು ತಂಡಗಳಲ್ಲಿ ಮೇಲ್ಕಂಡ ಚಟುವಟಿಕೆಯಲ್ಲಿ ತೊಡಗುವರು. ನಂತರ ಶಾಲಾ ಕೊಠಡಿಗೆ ಬರುವರು. | | | | | |
| | 10 ನಿ | | | | ಶಿಕ್ಷಕ | ತರಗತಿಯಲ್ಲಿ ಮಕ್ಕಳನ್ನು ಗುಂಪುಗಳಲ್ಲಿ ಕುಳ್ಳಿರಿಸಿ ¼ ಅಳತೆಯ ಡ್ರಾಯಿಂಗ್ ಶೀಟ್, ಗಮ್ ಅಥವಾ ಫೆವಿಕಾಲ್ ಕೊಡುವರು. | | | | | |
| | 35 ನಿ | | | | ಶಿಕ್ಷಕ | ಈ ಕೆಳಕಂಡ ಕ್ರಮದಲ್ಲಿ ವಸ್ತುಗಳ ಆಕೃತಿಗಳನ್ನು ತಯಾರಿಸುವರು.<br>* ನಿರ್ದಿಷ್ಟವಾಗಿ ಕೊಟ್ಟ ಅಳತೆಯ ಒಂದು ಡ್ರಾಯಿಂಗ್ ಕಾಗದವನ್ನು ತೆಗೆದುಕೊಂಡು ಒಂದು ಬೋರ್ಡಿಗೆ ಅಂಟಿಸುವರು.<br>* ಮೊದಲು ಬೇರೆ ಬೇರೆ ಆಕಾರದಲ್ಲಿ ಸಂಗ್ರಹ ಮಾಡಿರುವ ಎಲ್ಲಾ ಎಲೆಗಳನ್ನು ಕೂಡಿ ಹಾಕಿ ಅದರಲ್ಲಿರುವ ದೊಡ್ಡ ಎಲೆ ಆಯ್ದುಕೊಂಡು ಎಡುಬದಿಯಲ್ಲಿ ತೋರಿಸಿದಂತೆ ಅಂಟಿಸುವರು ಅಥವಾ ದೊಡ್ಡದಾದ ದುಂಡನೆಯ ಒಂದು ಎಲೆ ತೆಗೆದುಕೊಂಡು ಕಾಗದದ ಮಧ್ಯೆ ಅಂಟಿಸುವರು. | | | | | |
| | 05 ನಿ | | | | ಶಿಕ್ಷಕರು ಮಕ್ಕಳ ಕಾರ್ಯ ಪರಿಶೀಲಿಸಿ, ಮೆಚ್ಚುಗೆ ಸೂಚಿಸಿ ಪ್ರೋತ್ಸಾಹ ನೀಡುವರು. | | | | | | |



"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>K-8 | 20 ನಿ | ಕನ್ನಡ<br>ಆನೆ ಬಂತೊಂದಾನೆ. | * ಸರಳ ಪದಗಳನ್ನು ವಾಕ್ಯಗಳನ್ನು ಉಚ್ಚರಿಸುವುದು. | ಕಾಗೆ ಮರದ ಮೇಲೆ ಕುಳಿತಿರುವ ಚಿತ್ರ ಪಟ | ಶಿಕ್ಷಕರು | **ಪೂ.ಸಿ. ಚಟುವಟಿಕೆ :**<br>* ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ "ಕಾಗೆಯೊಂದು ಹಾರಿಬಂದು ಮರದ ಮೇಲೆ ಕುಳಿತುಕೊಂಡು" ಎಂಬ ಹಾಡನ್ನು ಅಭಿನಯದ ಮೂಲಕ ಹೇಳಿ ಕೊಡುವರು. | ಕನ್ನಡ<br>ಮೂರು ಕೊಡಲಿಗಳು | * ಸುಮಾರು ಪದಗಳನ್ನು ಓದಿ ಗ್ರಹಿಸುವ ಸಾಮರ್ಥ್ಯ ಬೆಳೆಸುವುದು. | ಕೊಡಲಿಗಳ ಮಾದರಿಗಳು | ಶಿಕ್ಷಕರು | 1ನೇ ತರಗತಿಯ ಮಕ್ಕಳ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 30 ನಿ | | | | ಶಿಕ್ಷಕರು | ಮೇಲಿನ ಕಥನ ಗೀತೆಗೆ ಸಂಬಂಧಿಸಿದಂತೆ ಸರಳ ಪ್ರಶ್ನೆಗಳನ್ನು ಕೇಳಿ ಗುಂಪಿನಲ್ಲಿ ಉತ್ತರ ಪಡೆಯುವರು ನಂತರ ವೈಯಕ್ತಿಕವಾಗಿ ಪ್ರಶ್ನಿಸಿ ಉತ್ತರ ಪಡೆಯುವರು.<br>ಉದಾ : * ಕಾಗೆ ಎಲ್ಲಿ ಕುಳಿತಿತ್ತು ?<br>ಇತ್ಯಾದಿ........ | | | | ಹಿರೇಮಣಿ | ಮೂರು ಕೊಡಲಿಗಳು ಪಾಠವನ್ನು ಮೊದಲು ಹಿರೇಮಣಿ ನಂತರ ಉಳಿದ ಮಕ್ಕಳು ಓದುವರು. ಇತರರು ಅದನ್ನು ಆಲಿಸುತ್ತಾ ಪಾಠವನ್ನು ಗಮನಿಸುವರು. |
| | 30 ನಿ | | | | ಹಿರೇಮಣಿ | ಶಿಶುಗೀತೆ / ಕಥೆಗಳ ಧ್ವನಿ ಸುರುಳಿಯನ್ನು ಕೇಳಿಸುವರು.<br>**ಸೂಚನೆ :** ಅವಧಿಯ ಕೊನೆಯಲ್ಲಿ ತರಗತಿ ನಿರ್ವಹಣೆಯ ಸಮಯವೂ ಸೇರಿದೆ. | | | | ಶಿಕ್ಷಕರು | ಶಿಕ್ಷಕರು ಪಾಠದ ಪ್ರಾರಂಭದಿಂದ ಪುಟ 9ರ..................... ಕಣ್ಣೀರು ಬಂತು ವರೆಗೆ ಸೂಕ್ತ ಸ್ವರ ಭಾರದೊಂದಿಗೆ ಓದುವರು. ಮಕ್ಕಳು ಪುಸ್ತಕದ ಪಾಠವನ್ನು ಗಮನಿಸುತ್ತಾ ಆಲಿಸುವರು. ಶಿಕ್ಷಕರು ಹೇಳಿಕೊಟ್ಟು ನಂತರ ಪಾಠವನ್ನು ಓದಿಸುವರು ಹಾಗೂ ಮಕ್ಕಳಿಂದ ವೈಯಕ್ತಿಕವಾಗಿ ಓದಲು ಸಹಾಯ ಮಾಡುತ್ತಾ ಓದಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2<br>K - 5 | 10 ನಿ | ಗಣಿತ<br>ಸಂಖ್ಯೆಗಳು | 1 ರಿಂದ 5ರ ವರೆಗಿನ ಸಂಖ್ಯೆಗಳನ್ನು ಗುರುತಿಸುವುದು, ಓದುವುದು ಮತ್ತು ಬರೆಯುವುದು. | ಸಂಖ್ಯೆಗಳ ಕಾರ್ಡ್, ಕಡ್ಡಿಗಳು / ಬೀಜಗಳು / ಗುಂಡಿಗಳು | ಶಿಕ್ಷಕ | ಶಿಕ್ಷಕರು ಮಕ್ಕಳಿಗೆ 1 ರಿಂದ 5ರ ವರೆಗಿನ ಸಂಖ್ಯೆಗಳುಳ್ಳ ಹಲವಾರು ಕಾರ್ಡ್‌ಗಳನ್ನು ಕೊಟ್ಟು ಆ ಕಾರ್ಡ್‌ಗಳ ಮೇಲೆ ಬೀಜ / ಗುಂಡಿಗಳನ್ನು / ಕಡ್ಡಿಗಳನ್ನು ಇರಿಸುವಂತೆ ಹೇಳುವರು. | ಗಣಿತ<br>ಸಂಖ್ಯೆಗಳು | * ನೂರರ ಒಳಗಿನ ಸಂಖ್ಯೆಗಳನ್ನು ಎಣಿಸುವುದು, ಬರೆಯುವುದು ಮತ್ತು ಹತ್ತು ಬಿಡಿಗಳಾಗಿ ವಿಸ್ತರಿಸುವುದು. | 1 ರಿಂದ 99ರ ವರೆಗೆ ಸಂಖ್ಯೆಗಳ ಕಾರ್ಡ್‌ಗಳು | ಹಿರೇಮಣಿ | ಹಿರೇಮಣಿಯ ಸಹಾಯದಿಂದ ಸಂಖ್ಯೆಗಳ ಚಾರ್ಟ್ ಬಳಸಿ, 1 ರಿಂದ 99 ನಂತರ 99 ರಿಂದ 1ರ ವರೆಗೆ ಹೇಳಿಸುವರು. |
| | 25 ನಿ | | | | ಹಿರೇಮಣಿ | ಮಕ್ಕಳು ತಮ್ಮ ಬಳಿ ಇರುವ ಕಾರ್ಡ್‌ಗಳನ್ನು ಬದಲಿಸುತ್ತಾ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | ಮಕ್ಕಳಿಗೆ ಶಿಕ್ಷಕರು ಪುಟ–20ರಲ್ಲಿನ ಚಟುವಟಿಕೆಗಳನ್ನು ಮಾಡಿಸಿ, ನಂತರ ತಾವು ಹೇಳಿದ ಸಂಖ್ಯೆಗಳ ಮೇಲೆ ಗುಂಡಿ ಇರಿಸುವಂತೆ ಹೇಳುವರು. ನಂತರ ಕೆಲವು ಬಾರಿ – 1 ರಿಂದ 99ರವರೆಗೆ ಮತ್ತು 99 ರಿಂದ 1ರ ವರೆಗೆ ಹೇಳಿಸುವರು. |
| | 05 ನಿ | | | | | ಮುಂದಿನ ಚಟುವಟಿಕೆಗೆ ಸಿದ್ಧತೆ ಮಾಡಿಕೊಳ್ಳುವರು. | | | | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :**<br>ಶಿಕ್ಷಕರು ವಿದ್ಯಾರ್ಥಿಗಳ ಸಾಮರ್ಥ್ಯಗಳಿಕೆಯನ್ನು ಪರೀಕ್ಷಿಸಲು ಎಲ್ಲಾ ವಿದ್ಯಾರ್ಥಿಗಳು ಪುಟ ಸಂಖ್ಯೆ – 21, 22, 23, 24ರಲ್ಲಿ ಇರುವ ಚಟುವಟಿಕೆಗಳನ್ನು ಮಾಡುವಂತೆ ನಿರ್ದೇಶನ ನೀಡುವರು, ಕಾರ್ಡ್ ಬಳಸಿ ಸ್ಥಾನಬೆಲೆ ಹೆಸರಿಸುವಂತೆ ಸೂಚಿಸುವರು. |
| | 30 ನಿ | | | | ಶಿಕ್ಷಕ | ಪಠ್ಯಪುಸ್ತಕದಲ್ಲಿನ ಪುಟಸಂಖ್ಯೆ 10 ರಿಂದ 14ರಲ್ಲಿರುವ ಚಿತ್ರಗಳನ್ನು ಬಳಸಿ ಅವುಗಲ್ಲಿ ಪ್ರತಿ ವಸ್ತುಗಳು ಎಷ್ಟಿವೆ ? ಎಂಬುದನ್ನು ಎಣಿಸುವಂತೆ ಮತ್ತು ಹೇಳುವಂತೆ ತಿಳಿಸುವರು.<br>ಮಕ್ಕಳ ಹೇಳಿಕೆಗಳನ್ನು ಅವಶ್ಯಕವಿದ್ದಲ್ಲಿ ತಿದ್ದಿ, ಮಾರ್ಗದರ್ಶನ ನೀಡುವರು. | | | | ಹಿರೇಮಣಿ | ಎಲ್ಲಾ ಮಕ್ಕಳು ಮೌಲ್ಯಮಾಪನ ಚಟುವಟಿಕೆಯಲ್ಲಿ ತೊಡಗುವರು.<br>(ಹಿರೇಮಣಿಯ ನೇತೃತ್ವದಲ್ಲಿ) |
| | 10 ನಿ | | | | ಹಿರೇಮಣಿ | ನಂತರ ಮಕ್ಕಳಿಗೆ ತಮ್ಮ ಪುಸ್ತಕದಲ್ಲಿ 1 ರಿಂದ 5ರ ವರೆಗೆ ಬರೆಯುವಂತೆ ಸೂಚಿಸುವರು. | | | | ಶಿಕ್ಷಕ | ಕೊನೆಯಲ್ಲಿ ಶಿಕ್ಷಕ ಎಲ್ಲಾ ವಿದ್ಯಾರ್ಥಿಗಳು ಬರೆದ ಉತ್ತರಗಳನ್ನು (ಸಂಖ್ಯೆಗಳನ್ನು) ಪರೀಕ್ಷಿಸಿ, ಮಕ್ಕಳ ಮೌಲ್ಯಮಾಪನ ಮಾಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 20 ನಿ | ಜೀವನ ವಿಜ್ಞಾನ * ದೈಹಿಕ ಸ್ವಚ್ಛತೆಯ ಮಹತ್ವ * ಉಸಿರಾಟ | * ದೈಹಿಕ ಸ್ವಚ್ಛತೆಯ ಮಹತ್ವವನ್ನು ಮಕ್ಕಳು ಗುರುತಿಸುವರು * ದೀರ್ಘ ಉಸಿರಾಟದ ಕ್ರಮವನ್ನು ಅರಿಯುವರು. | ಹಗ್ಗ ಕರವಸ್ತ್ರ | ಶಿಕ್ಷಕ | ಶಿಕ್ಷಕರು ಕಣ್ಣು ಕಟ್ಟಿ ಇತರರನ್ನು ಮುಟ್ಟುವ ಆಟ ಆಡಿಸುವರು, ನಂತರ ಮೂರು ಕಾಲಿನ ಓಟ ಆಟ ಆಡಿಸುವರು. | ಜೀವನ ವಿಜ್ಞಾನ * ದೈಹಿಕ ಸ್ವಚ್ಛತೆಯ ಮಹತ್ವ * ಉಸಿರಾಟ | * ದೈಹಿಕ ಸ್ವಚ್ಛತೆಯ ಮಹತ್ವವನ್ನು ಮಕ್ಕಳು ಗುರುತಿಸುವರು. * ದೀರ್ಘ ಉಸಿರಾಟದ ಕ್ರಮವನ್ನು ಅರಿಯುವರು. | ಹಗ್ಗ, ಕರವಸ್ತ್ರ | ಶಿಕ್ಷಕ | ಶಿಕ್ಷಕರು ಆಡಿಸಿದ ಆಟಗಳಲ್ಲಿ ಒಂದನೇ ತರಗತಿಯ ಮಕ್ಕಳೊಂದಿಗೆ ಪಾಲ್ಗೊಳ್ಳುವರು. |
| | 40 ನಿ | | | ದೇಹದ ಅಂಗಗಳ ಚಾರ್ಟ್ | ಶಿಕ್ಷಕ | ಈಗ ಶಿಕ್ಷಕರು ""ಇತರರನ್ನು ಏಕೆ ಮುಟ್ಟಲು ಸಾಧ್ಯವಾಗಲಿಲ್ಲ? ಮತ್ತು "ಏಕೆ ಬೇಗ ಓಡಲು ಸಾಧ್ಯವಾಗಲಿಲ್ಲ ಎಂಬ ಪ್ರಶ್ನೆಗಳನ್ನು ಕೇಳುತ್ತ ದೇಹದ ಅಂಗಗಳ ಪ್ರಾಮುಖ್ಯತೆಯ ಬಗ್ಗೆ ಚರ್ಚೆ ಮಾಡುವರು.<br>ನಂತರ ದೇಹದ ಈ ಅಂಗಗಳ ಸ್ವಚ್ಛತೆಗಾಗಿ ನಾವು ರೂಢಿಸಬೇಕಾದ ಅಭ್ಯಾಸಗಳ ಬಗ್ಗೆ ವಿವರಿಸುವರು ಹಾಗೂ ದೈಹಿಕ ಸ್ವಚ್ಛತೆಯ ಪ್ರಾಮುಖ್ಯತೆಯ ಬಗ್ಗೆ ಮಕ್ಕಳಿಗೆ ತಿಳಿಸುವರು. | | | ದೇಹದ ಅಂಗಗಳ ಚಾರ್ಟ್ | ಶಿಕ್ಷಕ | ಒಂದನೇ ತರಗತಿಯ ಮಕ್ಕಳೊಂದಿಗೆ ಚರ್ಚೆಯಲ್ಲಿ ಪಾಲ್ಗೊಂಡು, ದೈಹಿಕ ಸ್ವಚ್ಛತೆಯ ಪ್ರಾಮುಖ್ಯತೆಯನ್ನು ಮನಗಾಣುವರು. |
| | 20 ನಿ | | | | ಶಿಕ್ಷಕ | ನಂತರ ಶಿಕ್ಷಕರು ಉಸಿರಾಟದ ಪ್ರಾಮುಖ್ಯತೆಯ ಬಗ್ಗೆ ತಿಳಿಸುತ್ತಾ ಮಕ್ಕಳಿಗೆ ದೀರ್ಘ ಉಸಿರಾಟ ಕ್ರಿಯೆಯನ್ನು ಅಭ್ಯಾಸ ಮಾಡಿಸುವರು. | | | | ಶಿಕ್ಷಕ | ಒಂದನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ದೀರ್ಘ ಉಸಿರಾಟ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವರು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 EVS-5 | 10 ನಿ | ಪರಿಸರ ಅಧ್ಯಯನ ನಮ್ಮನ್ನು ನೋಡಿದ್ದೀಯಾ ! | ಸುತ್ತಲೂ ಇರುವ ಸಾಮಾನ್ಯ ಪ್ರಾಣಿಗಳನ್ನು ಮತ್ತು ಸಸ್ಯಗಳನ್ನು ಗುರುತಿಸುವರು | ರಬ್ಬರ್ ಪೆನ್ಸಿಲ್ ಕ್ರೆಯಾನ್ಸ್ | ಶಿಕ್ಷಕ | ಪಠ್ಯಪುಸ್ತಕ ಪೆನ್ಸಿಲ್, ರಬ್ಬರ್, ಕ್ರೆಯಾನ್ಸ್/ ಬಣ್ಣದ ಪೆನ್ಸಿಲ್‌ಗಳನ್ನು ಸಿದ್ಧಪಡಿಸಿಕೊಳ್ಳಲು ಸೂಚಿಸುವರು. | ಪರಿಸರ ಅಧ್ಯಯನ ನಮ್ಮ ಸುತ್ತಲಿನ ಪ್ರಾಣಿಗಳು | ಸ್ಥಳೀಯ ಪ್ರಾಣಿಗಳನ್ನು ಗುರುತಿಸುವುದು | ಪಠ್ಯ ಪುಸ್ತಕ | ಶಿಕ್ಷಕ | ಪುಟಸಂಖ್ಯೆ 2ರ ಚಿತ್ರಗಳನ್ನು ನೋಡಿ ಅದಕ್ಕೆ ಸಂಬಂಧಿಸಿದಂತೆ ಪುಟಸಂಖ್ಯೆ 4ರ ಖಾಲಿ ಜಾಗ ಭರ್ತಿಮಾಡಲು ತಿಳಿಸುವರು. (ಹಿರೇಮಣಿಯ ನೇತೃತ್ವದಲ್ಲಿ) |
| | 30 ನಿ | | | ಪಠ್ಯಪುಸ್ತಕ | ಶಿಕ್ಷಕ | * ಪುಟಸಂಖ್ಯೆ 7ರ ಚಿತ್ರಗಳಿಗೆ ಬಣ್ಣ ಹಾಕಲು ತಿಳಿಸುವರು ಹಾಗೂ ವೈಯಕ್ತಿಕವಾಗಿ ಸಹಾಯ ಮಾಡುತ್ತಾ ಚಿತ್ರಗಳಿಗೆ ಬಣ್ಣ ಹಾಕಿಸುವರು.<br>* ಪುಟಸಂಖ್ಯೆ 8, 9ರ ಚಿತ್ರಗಳನ್ನು ತೋರಿಸಿ ಇವು ಏನು? ಎಂದು ಪ್ರಶ್ನಿಸುತ್ತಾ ಅವುಗಳನ್ನು ಗುರ್ತಿಸಲು ನೆರವಾಗುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 10 ನಿ | | | ಪಠ್ಯಪುಸ್ತಕ | ಹಿರೇಮಣಿ | ಹಿರೇಮಣಿ ನೇತೃತ್ವದಲ್ಲಿ ಪುಟಸಂಖ್ಯೆ 8, 9ರ ಚಿತ್ರಗಳನ್ನು ಹೇಳುವಂತೆ ಸೂಚಿಸುವರು. | | | ಪಠ್ಯಪುಸ್ತಕ | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು ಹಾಗೂ ಪ್ರಶಂಸಿಸುವರು.<br>ಪುಟ 4ರ "ನೀನು ನೋಡಿರುವ ಪ್ರಾಣಿಗಳ ಹೆಸರುಗಳನ್ನು ಬರೆ" ಚಟುವಟಿಕೆಯನ್ನು ಮಾಡಿಸುವರು ಹಾಗೂ ಪೂರಕವಾಗಿ ಪಕ್ಷಿಗಳು ಕೀಟಗಳು, ಚಾರ್ಟ್‌ಗಳನ್ನು ತೂಗುಹಾಕಿ ಅವುಗಳನ್ನು ಗುರುತಿಸಿ ಅವುಗಳ ಹೆಸರುಗಳನ್ನು ಬರೆಸುತ್ತಾ ತಿದ್ದುವರು. |
| | 30 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು | | | | | |

ಸೂಚನೆ : (ಶಿಕ್ಷಕರು ತರಗತಿ ಅಂತ್ಯದಲ್ಲಿ ಎರಡೂ ತರಗತಿಯ ಪರಿಶೀಲನೆ, ಕಾರ್ಯವೂ ಒಳಗೊಂಡಿರುತ್ತದೆ).

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **1** *K-9* | 10 ನಿ | ಕನ್ನಡ<br>ಆನೆ ಬಂತೊಂದಾನೆ | * ಸರಳ ಪದಗಳನ್ನು ವಾಕ್ಯಗಳನ್ನು ಉಚ್ಛರಿಸುವರು. | ಪಠ್ಯ ಪುಸ್ತಕ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>ಮಕ್ಕಳನ್ನು ಪಠ್ಯಪುಸ್ತಕದೊಂದಿಗೆ ವೃತ್ತಾಕಾರವಾಗಿ ಕುಳಿತುಕೊಳ್ಳುವಂತೆ ತಿಳಿಸುವರು. | ಕನ್ನಡ<br>ಮೂರು ಕೊಡಲಿಗಳು | * ಸುಮಾರು ಪದಗಳನ್ನು ಓದಿ ಗ್ರಹಿಸುವ ಸಾಮರ್ಥ್ಯ ಬೆಳೆಸುವುದು | | ಶಿಕ್ಷಕ | ಹಿರೇಮಣಿಯ ನೇತೃತ್ವದಲ್ಲಿ ಪಾಠವನ್ನು ವೈಯಕ್ತಿಕವಾಗಿ ಓದುವಂತೆ ತಿಳಿಸುವರು. |
| | 30 ನಿ | | | | ಶಿಕ್ಷಕ | ಪಠ್ಯಪುಸ್ತಕ ಪುಟ 4ರ ಚಿತ್ರವನ್ನು ತೋರಿಸಿ ಸಂಬಂಧಿಸಿದಂತೆ ಪ್ರಶ್ನಿಸುವರು ಹಾಗೂ ಆನೆ ಮಾವುತ, ಮಕ್ಕಳನ್ನು ಪರಿಚಯಿಸುವರು.<br>ಉದಾ : ಆನೆಯ ಮೇಲೆ ಯಾರು ಕುಳಿತಿದ್ದಾರೆ ? ಇತ್ಯಾದಿ, ನಂತರ ಪ್ರಾರಂಭದ ಮೂರು ಸಾಲುಗಳನ್ನು ಸೂಕ್ತ ಸ್ವರಭಾರಗಳೊಂದಿಗೆ ಓದುವರು ಹಾಗು ಹೇಳಿಕೊಟ್ಟು ಓದಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ಮಕ್ಕಳಿಗೆ ಆನೆಯ ಚಿತ್ರಪಟ ನೀಡಿ ಹಿರೇಮಣಿಯ ಸಹಾಯದಿಂದ ಆನೆಯ ಭಾಗಗಳನ್ನು ಹೇಳಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆ ಪೂರ್ಣಗೊಂಡ ಬಗ್ಗೆ ಪರಿಶೀಲಿಸಿ ಮಕ್ಕಳ ಓದನ್ನು ದೃಢಪಡಿಸಿಕೊಳ್ಳುವರು. |
| | 35 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ಭಾಗವಹಿಸುವರು ಮತ್ತು ಮುಂದಿನ ಅವಧಿಗೆ ಪೂರ್ವ ತಯಾರಿ ಮಾಡಿಕೊಳ್ಳುವರು. | | | | ಶಿಕ್ಷಕ | ಪುಟಸಂಖ್ಯೆ 10ರ ""ಆಗ ದೇವತೆ..........ಎಂದ"ವರೆಗೆ ಸೂಕ್ತ ಸ್ವರಭಾರದೊಂದಿಗೆ ಓದುವರು. ನಂತರ ಮಕ್ಕಳು ಪುನರುಚ್ಚರಿಸುವರು ಹೊಸ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಹೇಳಿಸುವರು ಹಾಗೂ ವೈಯಕ್ತಿಕವಾಗಿ ಓದಿಸುವರು.<br>ಹಾಗೂ ಮುಂದಿನ ಅವಧಿಗೆ ಪೂರ್ವ ತಯಾರಿ ಮಾಡಿಕೊಳ್ಳುವರು. |

ಸೂಚನೆ : (ಶಿಕ್ಷಕರು ತರಗತಿ ಅಂತ್ಯದಲ್ಲಿ ಎರಡೂ ತರಗತಿಯ ಪರಿಶೀಲನೆ, ಕಾರ್ಯವೂ ಒಳಗೊಂಡಿರುತ್ತದೆ).

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯಗಳು | ಬಳಸಬೇಕಾದ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯಗಳು | ಬಳಸಬೇಕಾದ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 (M-6) | 35 ನಿ | ಗಣಿತ ಸಂಖ್ಯೆಗಳು | * 6 ರಿಂದ 10ರ ವರೆಗಿನ ಸಂಖ್ಯೆಗಳನ್ನು ಓದುವುದು, ಗುರುತಿಸುವುದು ಮತ್ತು ಬರೆಯುವುದು. | ಬೀಜಗಳು, ಮಣಿಗಳು "ರಬ್ಬರ್ ಅಂಕಿಗಳು" | ಶಿಕ್ಷಕ | ಎರಡನೇ ತರಗತಿಯ ಮಕ್ಕಳೊಂದಿಗೆ ಆಟದಲ್ಲಿ (ಬಿಡಿ–ಹತ್ತು) ಪಾಲ್ಗೊಳ್ಳುವರು. | ಗಣಿತ ಸಂಖ್ಯೆಗಳು | * ಎರಡು ಅಂಕಿಗಳುಳ್ಳ ಸಂಖ್ಯೆಗಳಲ್ಲಿ ಬಿಡಿ ಮತ್ತು ಹತ್ತು ಸ್ಥಾನಗಳನ್ನು ಗುರುತಿಸುವುದು ಹಾಗೂ ಹತ್ತು ಗುಂಪು ಮತ್ತು ಬಿಡಿಯಾಗಿ ಬಿಡಿಸಿ ಬರೆಯುವುದು. | ಸಂಖ್ಯೆಗಳ ಮಿಂಚುಪಟ್ಟಿ | ಶಿಕ್ಷಕ | **ಪೂರ್ವಸಿದ್ಧತಾ ಚಟುವಟಿಕೆ :** ಎರಡನೇ ತರಗತಿ ಹಾಗೂ ಒಂದನೇ ತರಗತಿ ಮಕ್ಕಳನ್ನು ಕ್ರಮವಾಗಿ ಮುಂದಿನ ಹಾಗೂ ಹಿಂದಿನ ಸಾಲುಗಳಲ್ಲಿ ನಿಲ್ಲಿಸಿ. ಹತ್ತು ಬಿಡಿಗಳ ಆಟ ಆಡಿಸುವರು. ಶಿಕ್ಷಕರು ಹೇಳಿದ ಸಂಖ್ಯೆಯಂತೆ ಮುಂದಿನ ಸಾಲಿನವರು ಹತ್ತರ ಸ್ಥಾನದಲ್ಲಿರುವ ಸಂಖ್ಯೆಯನ್ನು ಬೆರಳಿನಲ್ಲಿ ತೋರಿಸುವರು ಹಿಂದಿನ ಸಾಲಿನವರು ಬಿಡಿ ಸ್ಥಾನದಲ್ಲಿನ ಸಂಖ್ಯೆಯನ್ನು ಬೆರಳಿನಲ್ಲಿ ತೋರಿಸುವರು. (ವಿ.ಸೂ. : ಬಿಡಿಸ್ಥಾನದ ಸಂಖ್ಯೆ 5ಕ್ಕೆ ಮೀರದಂತೆ). |
| | 05 ನಿ | | | | ಹಿರೇಮಣಿ | ಮಕ್ಕಳು ಹಿರೇಮಣಿಯ, ಸಹಾಯದೊಂದಿಗೆ ಗುಂಪುಗಳಾಗಿ ಕುಳಿತುಕೊಳ್ಳುವರು. | | | | ಶಿಕ್ಷಕ | **ಕಲಿಕೆಯ ಚಟುವಟಿಕೆ :** ನಂತರ ಮಕ್ಕಳಿಂದ 99ಕ್ಕೆ ಮೀರದಂತೆ ಸಂಖ್ಯೆಗಳ ಕಾರ್ಡ್‌ನ್ನು ಕೊಟ್ಟು ಅವುಗಳಲ್ಲಿನ ಹತ್ತುಗಳು ಹಾಗೂ ಬಿಡಿಗಳನ್ನು ಗುರುತಿಸಿ. ತರಗತಿಯ ಮುಂದೆ ಬಂದು ಹೇಳುವಂತೆ ಸೂಚನೆ ನೀಡುವರು. (ಹಿರೇಮಣಿಯ ನೇತೃತ್ವದಲ್ಲಿ) |
| | 30 ನಿ | | | | ಶಿಕ್ಷಕ | **ಪೂರ್ವಸಿದ್ಧತಾ ಚಟುವಟಿಕೆ :** ಮಕ್ಕಳ ಸಂಖ್ಯೆಗಳಿಗೆ ಅನುಗುವಾಗಿ 5 ಅಥವಾ 6 ಗುಂಪುಗಳನ್ನು ಮಾಡಿ ನೆಲದ ಮೇಲೆ 6 ರಿಂದ 7ರ ವರೆಗೆ ಸಂಖ್ಯೆಗಳನ್ನು ಬರೆದು ಅದರ ಮೇಲೆ ಮಣಿ, ಬೀಜಗಳನ್ನು ಜೋಡಿಸುವ ಹಾಗೂ ಅವುಗಳ ಮೇಲೆ ಬೆರಳಾಡಿಸುವ ಚಟುವಟಿಕೆಯನ್ನು ಮಾಡಿಸುವರು. | | | | ಹಿರೇಮಣಿ | ತಮಗೆ ದೊರೆತ ಕಾರ್ಡ್‌ಗಳಲ್ಲಿನ ಸಂಖ್ಯೆಗಳಲ್ಲಿನ ಹತ್ತು ಹಾಗೂ ಬಿಡಿಗಳನ್ನು ಗುರುತಿಸಿ ಹೇಳುವರು |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆಯನ್ನು ಗಮನಿಸುತ್ತಾ ಅವರು ಬೆರಳಾಡಿಸುತ್ತಿರುವ ದಿಕ್ಕು ಸರಿ ಇದೆಯೇ ಎಂದು ಪರೀಕ್ಷಿಸಿ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಮಕ್ಕಳ ಚಟುವಟಿಕೆ ಗಮನಿಸಿ ಮಾರ್ಗದರ್ಶನ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ವಿಷಯ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ಘಟಕ / ಪಾಠದ ಹೆಸರು | ಸಾಮರ್ಥ್ಯಗಳು | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಘಟಕ / ಪಾಠದ ಹೆಸರು | ಸಾಮರ್ಥ್ಯಗಳು | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 EVS-6 | 20 ನಿ | ಪರಿಸರ ಅಧ್ಯಯನ ನನ್ನನ್ನು ನೋಡಿದ್ದೀರಾ ? | ಸುತ್ತಲಿನ ಪರಿಸರದ ಸಾಮಾನ್ಯ ಪ್ರಾಣಿಗಳು ಮತ್ತು ಸಸ್ಯಗಳನ್ನು ಗುರುತಿಸುವುದು. | ಅಭಿನಯ ಗೀತೆ | ಶಿಕ್ಷಕರು | ಎರಡನೇ ತರಗತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | ಪರಿಸರ ಅಧ್ಯಯನ ನನ್ನ ಸುತ್ತಲಿನ ಸಸ್ಯಗಳು | * ತನ್ನ ಸುತ್ತಲಿನ (ಸ್ಥಳೀಯ) ಪರಿಸರದಲ್ಲಿನ ಮರ ಗಿಡಗಳು ಮತ್ತು ಬೆಳೆಗಳನ್ನು ಗುರುತಿಸುವುದು ಹಾಗೂ ಸಸ್ಯಗಳ ಎತ್ತರ, ಎಲೆಗಳ ಆಕಾರ, ಬಣ್ಣ ಮುಂತಾದವುಗಳನ್ನು ಹೋಲಿಸುವುದು. | ಅಭಿನಯ ಗೀತೆ | ಶಿಕ್ಷಕರು | **ಪೂರ್ವಸಿದ್ಧತಾ ಚಟುವಟಿಕೆ :** ಬೇಕೆ ಬೇಕೆ ತರಕಾರಿ ಎಂಬ ಹಾಡನ್ನು ಅಭಿನಯದೊಂದಿಗೆ ಶಿಕ್ಷಕರು ಹಾಡಿಸುವರು. |
| | 25 ನಿ | | | ಚಾರ್ಟ್ ಹಾಗೂ ನೋಟ್ ಪುಸ್ತಕ | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಪ್ರಾಣಿಗಳು ಮತ್ತು ಸಸ್ಯಗಳ ಚಾರ್ಟ್‌ಗಳಲ್ಲಿ ಇರುವ ಚಿತ್ರಗಳನ್ನು ಗುರುತಿಸಿ ಹೆಸರಿಸುವಂತೆ ವಿದ್ಯಾರ್ಥಿಗಳಿಗೆ ಸೂಚನೆ ನೀಡುವರು.<br>ಸೂಚನೆಯಂತೆ ವಿದ್ಯಾರ್ಥಿಗಳು ಚಟುವಟಿಕೆಯಲ್ಲಿ ತೊಡಗುವರು. | | | ಸಸ್ಯಗಳ ಚಿತ್ರಪಟ ನೈಜ ಮಾದರಿಗಳು | ಶಿಕ್ಷಕ | **ಕಲಿಕೆಯ ಚಟುವಟಿಕೆ :**<br>ಶಿಕ್ಷಕರು ಬೆಳೆಗಳು, ಹಣ್ಣುಗಳು / ಸಸ್ಯಗಳ ಚಿತ್ರಗಳನ್ನು ಪ್ರದರ್ಶಿಸುತ್ತಾ (ನೈಜ ಮಾದರಿಗಳನ್ನು) ಗುರುತಿಸುವಂತೆ ಹೇಳುವರು.<br>ಉದಾ : ರಾಗಿಯ ಸಸ್ಯವನ್ನು ಪ್ರದರ್ಶಿಸುತ್ತಾ ಇದು ಯಾವ ಸಸ್ಯ ಎಂದು ಕೇಳುವರು.<br>ಹಾಗೆಯೇ ಗೊತ್ತಿಲ್ಲದ ಸಸ್ಯಗಳನ್ನು ಪರಿಚಯಿಸುವರು. ಇದೇ ಕ್ರಮದಲ್ಲಿ ಗುಂಪಿನಲ್ಲಿ ಹಾಗೂ ವೈಯಕ್ತಿಕವಾಗಿ ಪ್ರಶ್ನಿಸಿ ಉತ್ತರ ಪಡೆಯುವರು. |
| | 05 ನಿ | | | | ಶಿಕ್ಷಕ | ಮೇಲ್ಕಂಡ ಚಟುವಟಿಕೆಯನ್ನು ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಹಿರೇಮಣಿಯ ನೇತೃತ್ವದಲ್ಲಿ ಸಸ್ಯಗಳ ಚಾರ್ಟ್‌ಗಳನ್ನು ತೂಗುಹಾಕಿ ಅವುಗಳನ್ನು ಗುರುತಿಸಿ ಹೇಳಿಸುವಂತೆ ಹಿರೇಮಣಿಗೆ ಸೂಚಿಸುವರು. |
| | 30 ನಿ | | | ಪೆನ್ಸಿಲ್ ರಬ್ಬರ್ ಪಠ್ಯಪುಸ್ತಕ | ಶಿಕ್ಷಕ | * ವಿದ್ಯಾರ್ಥಿಗಳು ಪುಟಸಂಖ್ಯೆ 5ನ್ನು ತೆರೆಯಲು ತಿಳಿಸಿ ""ಪ್ರಾಣಿಗಳ ದೇಹಕ್ಕೆ ಹೊಂದಾಣಿಕೆಯ ಮುಖ ಗುರುತಿಸುವ ಚಟುವಟಿಕೆ" ಮಾಡಿಸಿ ಹೊಂದಿಸುವಂತೆ ತಿಳಿಸುವರು.<br>* ಪುಟ ಸಂಖ್ಯೆ 10ರ ಮೌಲ್ಯಮಾಪನ ಚಟುವಟಿಕೆಗಳನ್ನು ಮಾಡಿಸುವರು. | | | | ಹಿರೇಮಣಿ | ಮೇಲ್ಕಂಡ ಚಟುವಟಿಕೆಯಲ್ಲಿ ತೊಡಗುವರು. |
| | | | | | | **ಸೂಚನೆ :** ತರಗತಿಯ ಅಂತ್ಯದಲ್ಲಿ ಎರಡೂ ತರಗತಿಯವರೂ ಪೂರೈಸಿದ ಚಟುವಟಿಕೆಗಳನ್ನು ಪರಿಶೀಲಿಸುವರು. | | | | | |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 | | ಸಾ.ಉ.ಉ.ಕಾ ಎಲೆಗಳ ಆಲ್ಬಮ್ ತಯಾರಿಸುವುದು | * ಪರಿಸರದಲ್ಲಿರುವ ಉಪಯುಕ್ತ ವಸ್ತುಗಳನ್ನು ಸಂಗ್ರಹಿಸಿ ಸಂರಕ್ಷಿಸುವರು. | ಗೋಂದು<br>ಎಲೆಗಳು<br>ಡ್ರಾಯಿಂಗ್<br>ಶೀಟ್<br>ಸ್ಕೆಚ್‌ಪೆನ್ | [ವಿ.ಸೂ. : ಎರಡೂ ತರಗತಿಯ ಹೊಂದಾಣಿಕೆಯಿಂದಾಗಿ ಎರಡೂ ತರಗತಿಯ ವಿದ್ಯಾರ್ಥಿಗಳು ಕೂಡಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು] | | ಸಾ.ಉ.ಉ. ಕಾರ್ಯ ಎಲೆಗಳ "ಆಲ್ಬಮ್" ತಯಾರಿಸುವುದು. | * ಪರಿಸರದಲ್ಲಿನ ಉಪಯುಕ್ತ ವಸ್ತುಗಳನ್ನು ಸಂಗ್ರಹಿಸಿ ಸಂರಕ್ಷಿಸುವುದು | | | |
| | 10 ನಿ | | | | ಶಿಕ್ಷಕ | ಎರಡೂ ತರಗತಿಗಳನ್ನು ಒಟ್ಟಿಗೆ ವೃತ್ತಾಕಾರವಾಗಿ ಕೂರಿಸುವರು. | | | | | |
| | 30 ನಿ | | | | ಶಿಕ್ಷಕ | ಹಿಂದಿನ ಸಾ.ಉ.ಉ.ಕಾ ತರಗತಿಯಲ್ಲಿ ವಿದ್ಯಾರ್ಥಿಗಳು ಸಂಗ್ರಹಿಸಿ, ಪುಸ್ತಕದಲ್ಲಿ ಜೋಡಿಸಿಟ್ಟಿರುವ ಎಲೆಗಳನ್ನು ವಿದ್ಯಾರ್ಥಿಗಳಿಗೆ ಹಂಚುವರು ಹಾಗೂ ಹಿರಿಯ (ಎರಡನೇ) ತರಗತಿಯ ವಿದ್ಯಾರ್ಥಿಗಳ ಸಹಾಯದೊಂದಿಗೆ ಸಂಗ್ರಹಿಸಿದ ಎಲೆಗಳನ್ನು ಅವುಗಳ ಆಕಾರಕ್ಕೆ ತಕ್ಕಂತೆ ವಿಂಗಡಿಸುವರು.<br>ನಂತರ ಶಿಕ್ಷಕಕರು ಚೌಕಾಕಾರದ ಡ್ರಾಯಿಂಗ್ ಶೀಟ್ ಹಾಗೂ ಗೋಂದನ್ನು ವಿದ್ಯಾರ್ಥಿಗಳಿಗೆ ಹಂಚುವರು. | | | | | |
| | 20 ನಿ | | | | | ವಿದ್ಯಾರ್ಥಿಗಳು ಎಲೆಗಳ ಆಕೃತಿ ಹಾಗೂ ಆಕಾರಗಳಿಗೆ ಅನುಗುಣವಾಗಿ ಚಿಕ್ಕದರಿಂದ ದೊಡ್ಡದರಂತೆ ಎಲೆಗಳನ್ನು ಅಂಟಿಸುವರು. | | | | | |
| | 20 ನಿ | | | | ಶಿಕ್ಷಕ | ಶಿಕ್ಷಕರು ಅಂಟಿಸಿರುವ ಎಲೆಗಳನ್ನು ಮೊದಲಿಗೆ ಗುರುತಿಸಿ, ಅವುಗಳ ಹೆಸರುಗಳನ್ನು ಹೇಳಿಸುವರು. ನಂತರ 2ನೇ ತರಗತಿಯ ವಿದ್ಯಾರ್ಥಿಗಳು ಎಲೆಗಳ ಹೆಸರುಗಳನ್ನು ಅಂಟಿಸಿದ ಎಲೆಗಳ ಕೆಳಗೆ ಡ್ರಾಯಿಂಗ್ ಶೀಟ್‌ಗಳ ಮೇಲೆ ಬರೆಯುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".